JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ವಸಾಹತು ಅನುಭವ

**ಡಾ.ಮೋಹನ್ ಎ**

**ಸಹಾಯಕ ಪ್ರಾಧ್ಯಾಪಕರು**

**ಸ.ಪ್ರ.ದ.ಕಾ ಚಿತ್ರಹಳ್ಳಿ**

ವಸಾಹತುಶಾಹಿ ಅನುಭವಕ್ಕೆ ಒಳಗಾದ ಭಾರತೀಯ ಸಮಾಜದಲ್ಲಿ ಬಹಳ ಮುಖ್ಯವಾಗಿ ಎರಡು ಬಗೆಯ ಪರಿಣಾಮಗಳನ್ನು ಗುರುತಿಸಬಹುದು. ಸಮಾಜದ ಲೋಕಗ್ರಹಿಕೆಗೆ ಬೇರೆ ಬೇರೆ ಪರಿಕರಗಳು ಲಭ್ಯವಾಯಿತು ಎಂಬುದು ಒಂದಾದರೆ, ಈ ಪರಿಕರಗಳಿಂದಾಗಿಯೇ ಲೋಕಗ್ರಹಿಕೆಯ ರೀತಿಯೂ ಬದಲಾಯಿತು ಎಂಬುದು ಇನ್ನೊಂದು ಇದರ ಪರಿಣಾಮ ಕಥನ ಪರಂಪರೆಯ ಮೇಲಾಗಿದೆ. ವಸಾಹತುಶಾಹಿ ವ್ಯವಸ್ಥೆ ಜಾರಿಗೆ ತಂದ ಶಿಕ್ಷಣ, ಕಾನೂನು, ಆಡಳಿತ ವ್ಯವಸ್ಥೆಗಳು ಈ ಪರಿಣಾಮಗಳಿಗೆ ಕಾರಣವಾಯಿತು. ಈ ವ್ಯವಸ್ಥೆ ಮತ್ತು ಅದರಿಂದ ಉಂಟಾದ ಪರಿಣಾಮಗಳನ್ನು ಭಾರತೀಯ ಸಮಾಜ ಮುಖ್ಯವಾಗಿ ಎರಡು ರೀತಿಯಲ್ಲಿ ಎದುರಿಸಿತು. ವಸಾಹತುಶಾಹಿ ವ್ಯವಸ್ಥೆಯನ್ನು ಒಪ್ಪುವ, ನಿರಾಕರಿಸುವ, ನಿರ್ಲಿಪ್ತವಾಗಿರುವ ಮೂಲಕ ಪ್ರತಿಕ್ರಿಯೆಯನ್ನು ನೀಡಿದರೆ, ಲೋಕಗ್ರಹಿಕೆಗೆ ಒದಗಿದ ಬೇರೆ ಬೇರೆ ಪರಿಕರಗಳನ್ನು ಒಗ್ಗಿಸಿಕೊಳ್ಳುವ, ಒಳಗೊಳ್ಳುವ ಮೂಲಕ ತನ್ನ ಅನನ್ಯತೆಯನ್ನು ಎತ್ತಿ ಹಿಡಿಯುವ ಪ್ರಯತ್ನವನ್ನು ಮಾಡಿತು. ಬಹುತೇಕ ಸಂದರ್ಭಗಳಲ್ಲಿ ಈ ಎರಡೂ ಒಟ್ಟಿಗೇ ಕೆಲಸ ನಿರ್ವಹಿಸಿತು ಎಂಬುದು ಗಮನೀಯವಾದುದು. ಇದನ್ನು ಕಥನ ಪರಂಪರೆಯಲ್ಲಿ ಕಾಣಬಹುದು. ವಸಾಹತುಶಾಹಿ ಅನುಭವ ಹೊರಗಿನಿಂದ ಬಂದ ಅಥವಾ ಹೇರಲ್ಪಟ್ಟ ಸಂಗತಿಯಾದಾಗ ಅದಕ್ಕೆ ಒಳಗಾದ ಸಮಾಜವು ಅದನ್ನು ಎದುರಿಸಿ ತಮ್ಮನ್ನು ಕಾಯ್ದುಕೊಂಡ ಕಥನವಾಗಿ ಈ ಪ್ರತಿಕ್ರಿಯೆಗಳು ಕಾಣುತ್ತವೆ.

ಕನ್ನಡವನ್ನೂ ಒಳಗೊಂಡ ಹಾಗೆ ಇಡಿಯ ಭಾರತ ವಸಾಹತುಶಾಹಿ ಅನುಭವಕ್ಕೆ ಒಳಗಾಗಿದ್ದು ಇಂದು ಇತಿಹಾಸದ ಭಾಗ. ಆದರೆ ಇಲ್ಲಿಯ ಸಮಕಾಲೀನತೆಯ ಗ್ರಹಿಕೆಗೆ ವಸಾಹತು ಕಾಲಘಟ್ಟದಲ್ಲಾದ ಸೂಕ್ಷ್ಮ ಪಲ್ಲಟಗಳ ಅರಿವು ಅನಿವಾರ್ಯವಾಗಿದೆ. ವಸಾಹತುಶಾಹಿ ಅನುಭವ ಇಲ್ಲಿಯ ಆರ್ಥಿಕ, ಸಾಮಾಜಿಕ, ರಾಜಕೀಯ ರಚನೆಗಳನ್ನು ಬದಲಾಯಿಸಿತು ಹಾಗೂ ಸಮುದಾಯದ ಯೋಚನಾಕ್ರಮದ ಬದಲಾವಣೆಗೆ ಕಾರಣವಾಯಿತು. ಈ ಎರಡೂ ಅಂಶಗಳು ಸಮಕಾಲೀನ ರಾಜಕೀಯ, ಆರ್ಥಿಕ ಸ್ಥಿತಿಯನ್ನು ನಿಯಂತ್ರಿಸಿವೆ. ಹಾಗಾಗಿಯೇ ವಸಾಹತು ಕಾಲಘಟ್ಟದಲ್ಲಾದ ಸೂಕ್ಷ್ಮ ಪಲ್ಲಟಗಳನ್ನು ಅರಿಯುವ ಅಗತ್ಯವಿದೆ. ಆ ಹೊತ್ತಿಗೆ ಸಮುದಾಯಗಳು ತಮ್ಮನ್ನು ಕಾಪಾಡಿಕೊಳ್ಳಲು ಬಳಸಿದ ಪರಿಕರ, ಪರಿಭಾಷೆಗಳು ಆ ನಂತರದ ದಿನಗಳಲ್ಲಿ ಬೇರೆಯದೇ ಅರ್ಥ ಪಡೆದುಕೊಂಡಿರುವ ಉದಾಹರಣೆಗಳಿವೆ. ಹಾಗಾಗಿ ಅಂದಿನ ಆಗುಹೋಗುಗಳ ಅರಿವು

ವಸಾಹತುಶಾಹಿ ಅನುಭವಗಳನ್ನು ಹಿಡಿದಿಟ್ಟುಕೊಂಡ ಬಹುಮುಖ್ಯ ಮಾಧ್ಯಮದಲ್ಲಿ ಸಾಹಿತ್ಯವೂ ಒಂದು. ಆ ಕಾಲಘಟ್ಟದ ಪರಿಣಾಮಗಳನ್ನು, ಅದಕ್ಕೆ ಬಂದ ಪ್ರತಿಕ್ರಿಯೆಗಳನ್ನು ಸಾಹಿತ್ಯವು ಪ್ರತಿಬಿಂಬಿಸಿತು ಮತ್ತು ಪ್ರತಿಕ್ರಿಯೆಗಳನ್ನು ರೂಪಿಸಿತು ಎಂಬುದು ಗಮನಾರ್ಹ. ಅಂದಿನ ಸಮಾಜ ಹೇಗಿದೆ ಎಂಬುದರ ಜೊತೆಗೆ ಹೇಗಿರಬೇಕು ಎನ್ನುವ ಆದರ್ಶವನ್ನು ಒಟ್ಟಿಗೇ ಹೇಳುತ್ತಾ ಸಾಗಿತು. ಹಾಗಾಗಿಯೇ ಕಥನ ಪರಂಪರೆಯ ಮೂಲಕ ಅಂದಿನ ಸಮಾಜದಲ್ಲಾದ ಆಗುಹೋಗುಗಳನ್ನು ಅರಿಯುವುದೆಂದರೆ ಅದು ಅಂದಿನ ಸ್ಥಿತಿಯನ್ನು ಅರಿಯುವುದರೊಂದಿಗೆ ವಿದ್ಯಾವಂತ ಸಮುದಾಯದ ಹಂಬಲಗಳನ್ನೂ, ಆ ಮೂಲಕ ಅವರ ಪ್ರತಿಕ್ರಿಯೆಗಳನ್ನು ಅರಿಯುವುದೇ ಆಗಿದೆ.

ಈ ಅಧ್ಯಯನವು ಕನ್ನಡ ಕಥನ ಸಾಹಿತ್ಯವನ್ನು ಮುಖ್ಯ ಆಕರವಾಗಿಟ್ಟುಕೊಂಡು ವಸಾಹತುಶಾಹಿ ಅನುಭವಕ್ಕೆ ಸಾಹಿತ್ಯದಲ್ಲಿ ವ್ಯಕ್ತವಾದ ಪ್ರತಿಕ್ರಿಯೆಯನ್ನು ಪರಿಶೀಲಿಸುವ ಪ್ರಯತ್ನವಾಗಿದೆ. 19ನೆಯ ಶತಮಾನದ ನಂತರದ ಕನ್ನಡ ಸಾಹಿತ್ಯವು ವಸಾಹತುಶಾಹಿಯ ಅನುಭವವನ್ನು ಅನೇಕ ನೆಲೆಗಳಲ್ಲಿ ಗ್ರಹಿಸಿದೆ ಮತ್ತು ಬಹುಮುಖಿ ನೆಲೆಗಳಲ್ಲಿ ಪ್ರತಿಕ್ರಿಯಿಸಿದೆ. ಆ ಹೊತ್ತಿನ ಸಂಕೀರ್ಣ ಸ್ಥಿತಿಯಲ್ಲಿ ಅನುಭವವು ಹೇಗೆ ಏಕಮುಖಿಯಾಗಿರಲಿಲ್ಲವೋ ಹಾಗೆಯೇ ಪ್ರತಿಕ್ರಿಯೆಗಳೂ ಕೂಡ.

ಈ ಅಧ್ಯಯನವು ತುಂಬಾ ಮುಖ್ಯವಾಗಿ ಹೊರಗಿನ ಶಕ್ತಿಗಳೆದುರು ಕನ್ನಡ ಕಥನ ಸಾಹಿತ್ಯವು ಚಹರೆಗಳನ್ನು ರೂಪಿಸಿಕೊಂಡ ಬಗೆಯನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿದೆ. ಕನ್ನಡ ಕಥನ ಸಾಹಿತ್ಯದಲ್ಲಿ ವಸಾಹತು ಆಡಳಿತದ ಮೂಲಕ ಬಂದ ಸುಧಾರಣೆಗಳನ್ನು ಒಪ್ಪುವ, ನಿರಾಕರಿಸುವ ಅಥವಾ ಅವುಗಳ ಬಗ್ಗೆ ಮೌನವಾಗುಳಿವ ರೂಪಗಳನ್ನು ಗುರುತಿಸಬಹುದು. ಅದಕ್ಕಿಂತಲೂ ಮುಖ್ಯವಾಗಿ ಕನ್ನಡ ಸಮುದಾಯ ಕಥನದ ಮೂಲಕ ವಸಾಹತುಶಾಹಿಯನ್ನು ಒಗ್ಗಿಸಿಕೊಂಡು ತನ್ನ ಸ್ವಾಯತ್ತತೆಯನ್ನು ಎತ್ತರಿಸಿಕೊಂಡ ಬಗೆಗಳನ್ನು ಗುರುತಿಸಬಹುದು. ಸಂಪತ್ತು ಮತ್ತು ಅಧಿಕಾರವಿರುವ ಹೊರಗಿನ ಶಕ್ತಿಯು ಆಕ್ರಮಣ ಮಾಡಿದಾಗ ಸಮುದಾಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು, ಹೊರಗಿನ ಶಕ್ತಿ ನೀಡಿದ ಎಲ್ಲ ಹೊಸತುಗಳನ್ನು ಸ್ವೀಕರಿಸಿಯೂ ಅದನ್ನು ಒಗ್ಗಿಸಿಕೊಂಡು ತನ್ನ ಸ್ವಂತದ ಚಹರೆಗಳನ್ನು ರೂಪಿಸಿಕೊಳ್ಳುತ್ತದೆ. ಇದು ತುಂಬ ಸರಳವಾದ ಪ್ರಕ್ರಿಯೆಯೇನು ಅಲ್ಲ. ಹೊಸದರಿಂದ ಆಯ್ದುಕೊಳ್ಳುವಾಗಿನ ಎಚ್ಚರ, ಪರಂಪರೆಯಿಂದ ಆಯ್ದುಕೊಂಡ ಪರಿಕರಗಳನ್ನು ಬಳಸಿಕೊಳ್ಳುವ ಜಾಣ್ಮೆ ಸಮುದಾಯದ ಸೃಜನಶೀಲತೆಯನ್ನು ತೋರಿಸುತ್ತದೆ. ಕನ್ನಡ ಕಥನ ಪರಂಪರೆಯು ವಸಾಹತುಶಾಹಿಯ ಸಂದರ್ಭದಲ್ಲಿ ಈ ಬಗೆಯ ಸೃಜನಶೀಲತೆಯನ್ನು ತೋರಿಸಿತು.

ಕನ್ನಡ ಕಥನ ಸಾಹಿತ್ಯವು ಬಹು ಮುಖ್ಯವಾಗಿ ಎರಡು ಆಶಯಗಳಿಗೆ ಮುಖಾಮುಖಿಯಾಯಿತು. ಭಾರತ ರಾಷ್ಟ್ರವು ದಾಸ್ಯದಿಂದ ಬಿಡುಗಡೆಯಾಗಬೇಕು; ಪರಕೀಯತೆಯೆದುರು ತಲೆಯೆತ್ತಿ ನಿಲ್ಲಬೇಕು ಎಂಬುದು ಒಂದು ಆಶಯವಾದರೆ, ಛಿದ್ರಗೊಂಡಿದ್ದ ಕನ್ನಡ ಪ್ರದೇಶಗಳು ಒಂದುಗೂಡಬೇಕು; ಒಂದು ನಾಡಾಗಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಬೇಕು ಎಂಬುದು ಇನ್ನೊಂದು ಆಶಯವಾಗಿತ್ತು. ಭಾರತ ರಾಷ್ಟ್ರವಾದಾಗ ಇದು ಪಡೆದುಕೊಳ್ಳಬೇಕಿದ್ದ ಆಕಾರ ಒಂದು ಬಗೆಯದಾದರೆ, ಕನ್ನಡನಾಡನ್ನು ಕನಸುವಾಗ ಇದು ಪಡೆಯಬೇಕಿದ್ದ ಆಕಾರ ಮತ್ತೊಂದೇ ಬಗೆಯದು. ಈ ಅಧ್ಯಯನವು ಮುಖ್ಯವಾಗಿ ಕನ್ನಡದ ಕಥನ ಜಗತ್ತು ತನ್ನನ್ನು ಪರಕೀಯ ಶಕ್ತಿಯೆದುರು ಸ್ಥಾಪಿಸಿಕೊಂಡ ರೀತಿಯನ್ನು ಪರಿಶೀಲಿಸುವುದರ ಜೊತೆಗೆ ಒಂದು ನಾಡಾಗಿ ತನ್ನ ಬಹುಮುಖತೆಯನ್ನು ಉಳಿಸಿಕೊಂಡ ರೀತಿಯನ್ನು ಗಮನಿಸುವ ಉದ್ದೇಶವನ್ನು ಹೊಂದಿದೆ.

ಭಾರತೀಯ ಸಮುದಾಯ ವಸಾಹತುಶಾಹಿಗೆ ನೀಡಿದ ಮತ್ತೊಂದು ಬಹುಮುಖ್ಯ ಪ್ರತಿಕ್ರಿಯೆಯೆಂದರೆ ವಸಾಹತುಶಾಹಿಯ ಶಕ್ತಿಯೆದುರು ತನ್ನ ಸ್ಥಳೀಯತೆಯ ಅಧಿಕೃತತೆಯನ್ನು ಸ್ಥಾಪಿಸಿಕೊಂಡಿದ್ದು. ವಸಾಹತು ವ್ಯವಸ್ಥೆ 'ಅಧಿಕೃತ'

ಎಂದು ಮಾನ್ಯ ಮಾಡಿದ ಸಂಗತಿಗಳನ್ನು, ಅದಕ್ಕೆ ಬಳಸಿಕೊಂಡ ಪರಿಕರಗಳನ್ನು ಬಳಸಿಕೊಂಡೇ ಇಲ್ಲಿಯ ಸ್ಥಳೀಯತೆಯ ಸ್ವಾಯತ್ತತೆಯನ್ನು ಅಧಿಕೃತಗೊಳಿಸಬೇಕಿತ್ತು. ಪಶ್ಚಿಮವು (ವಸಾಗತುಶಾಹಿ ವ್ಯವಸ್ಥೆ) ಉತ್ಕೃಷ್ಟ ಎಂದು ಭಾವಿಸಿದ್ದ ಸಂಗತಿಗಳನ್ನು ಸ್ಥಳೀಯ ಜೀವನ ಕ್ರಮದಿಂದಲೂ ಹೆಕ್ಕಿ ತೆಗೆದು ಪಶ್ಚಿಮಕ್ಕೆ ಸವಾಲು ಒಡ್ಡಿತು. ಹಾಗೆ ಮಾಡುವಾಗ ಇಲ್ಲಿಯ ಬಹುಮುಖಿ ಜೀವನ ಕ್ರಮವನ್ನು ನಿರಾಕರಿಸದೆ ಅವುಗಳನ್ನು ಶಕ್ತಿಯನ್ನಾಗಿ ಹೆಗ್ಗಳಿಕೆಯನ್ನಾಗಿ ಬಳಸಿಕೊಂಡಿತು. ಕನ್ನಡ ಕಥನ ಸಾಹಿತ್ಯವು ಸ್ಥಳೀಯ ಶಕ್ತಿಯೆಂದು ಆಯ್ದುಕೊಂಡ ಸಂಗತಿಗಳನ್ನು ಸ್ಥಾಪಿಸಿದ ಬಗೆಯನ್ನು ಪರಿಶೀಲಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ವಸಾಹತು ಆಕ್ರಮಣಕ್ಕೆ ಒಳಗಾದ ನಂತರದ ಬೇರೆ ಬೇರೆ ರೀತಿಯ ಬೆಳವಣಿಗೆಗಳು ಇದುವರೆಗೆ ಸಮಾಜದಲ್ಲಿದ್ದ ಅನೇಕ ಸಂಗತಿಗಳನ್ನು ಚರ್ಚೆಯ ಮುನ್ನೆಲೆಗೆ ತಂದು ಅದನ್ನು ಹೊಸ ರೂಪದಲ್ಲಿ ನೋಡುವಂತೆ ಮಾಡಿತು. ಧಾರ್ಮಿಕ ವಿಚಾರಗಳು ಹೀಗೆ ಮುನ್ನೆಲೆಗೆ ಬಂದ ಸಂಗತಿಗಳಲ್ಲಿ ಮುಖ್ಯವಾದದು, ಕ್ರಿಶ್ಚಿಯನ್ ಧರ್ಮದ ಪ್ರಭಾವ, ಸಮಾಜ ಸುಧಾರಣಾ ಚಳುವಳಿಗಳ ವಿಚಾರಗಳು, ಬದಲಾದ ಉತ್ಪಾದನಾ ಸಂಬಂಧಗಳು ಈ ಎಲ್ಲಾ ಕಾರಣಗಳಿಂದ ಧಾರ್ಮಿಕ ವಿಚಾರಗಳ ಕುರಿತು ವಿದ್ಯಾವಂತ ಸಮುದಾಯ ಚಿಂತಿಸಿತು. ಇಲ್ಲಿಯ ಸಾಮಾಜಿಕ ಸ್ಥಿತಿಗತಿಗಳ ಕುರಿತು ಆತ್ಮ ಶೋಧನೆಯನ್ನು ಮಾಡಿಕೊಳ್ಳಲು ಕಾರ್ಯಪ್ರವೃತ್ತವಾಯಿತು. ಕನ್ನಡ ಕಥನ ಸಾಹಿತ್ಯವು ಧಾರ್ಮಿಕತೆಯನ್ನು ಒಳಗೊಂಡ ಬಗೆ ಅಧ್ಯಯನಯೋಗ್ಯವಾದುದು. ಆ ಹೊತ್ತಿನ ತುರ್ತಿಗೆ ಸ್ಪಂದಿಸಿದ ಕಥನ ಸಾಹಿತ್ಯ ಕಟ್ಟಿಕೊಂಡ ಆಶಯವೇ ಇಂದಿಗೂ ಮುಂದುವರೆದಿದೆಯಲ್ಲದೆ ಅದು ಅನೇಕ ಬಿಕ್ಕಟ್ಟುಗಳಿಗೂ ಕಾರಣವಾಗಿದೆ. ಧಾರ್ಮಿಕ ಚೌಕಟ್ಟಿನೊಳಗೆ ಮಹಿಳಾಪ್ರಶ್ನೆಯನ್ನು ನಿಭಾಯಿಸಿಕೊಂಡ ರೀತಿ, ಆಡಳಿತಕ್ಕೂ ಧರ್ಮಕ್ಕೂ ಉಂಟಾದ ಹೊಸ ಸಂಬಂಧ, ಕ್ರಿಶ್ಚಿಯನ್ ಧರ್ಮದ ಪ್ರಭಾವವನ್ನು ಅರಗಿಸಿಕೊಂಡ ಬಗೆಯನ್ನು ಅರಿಯಲು ಈ ಅಧ್ಯಯನ ಉದ್ದೇಶಿಸಿದೆ. ಲಿಂಗ, ಜಾತಿ, ವರ್ಗ, ಜೀವನಕ್ರಮ, ಪ್ರಾದೇಶಿಕ ಭಿನ್ನತೆ, ಭಾಷೆ ಈ ವೈವಿಧ್ಯತೆ ಧರ್ಮದ ಕುರಿತ ಚರ್ಚೆಯನ್ನು ಪ್ರಭಾವಿಸಿವೆ. ಸ್ಥಳೀಯವಾಗಿದ್ದ ಧರ್ಮ, ದೇವರು, ಆಚರಣೆಗಳ ಬಹುರೂಪಗಳಲ್ಲಿ ಭಾರತೀಯ ವಿದ್ಯಾವಂತ ವರ್ಗದ ಆಯ್ಕೆ ಯಾವುದಾಗಿತ್ತು ಎಂಬುದನ್ನು ಗುರುತಿಸಬೇಕು. ಹಾಗೆಯೇ ಈ ಆಯ್ಕೆಗಳೇ ಹೇಗೆ ಇಡಿಯಾಗಿ ಇಲ್ಲಿಯ ಧರ್ಮ ಎನ್ನುವ ಪ್ರತಿನಿಧೀಕರಣಕ್ಕೆ ಒಳಗಾಯಿತು ಎಂಬುದನ್ನು ಅರಿಯಬೇಕಿದೆ. ವಿದ್ಯಾವಂತ ಸಮುದಾಯದ ಆಯ್ಕೆ ಮತ್ತು ಜೋಡಣೆಯ ಹಿಂದಿದ್ದ ಒತ್ತಡಗಳನ್ನು, ಪ್ರಭಾವಗಳನ್ನು ತಿಳಿಯುವುದು ಹಾಗೂ ಕಥನ ಸಾಹಿತ್ಯದಲ್ಲಿ ಅಭಿವ್ಯಕ್ತವಾದ ಆಶಯಗಳನ್ನು ಪರಿಶೀಲಿಸುವುದು ಈ ಅಧ್ಯಯನದ ಉದ್ದೇಶ.

ವಸಾಹತು ವ್ಯವಸ್ಥೆಯಿಂದ ಜಾರಿಯಾದ ಶಿಕ್ಷಣ, ಕಾನೂನು, ಕಂದಾಯ, ಆಡಳಿತ ಇತ್ಯಾದಿಗಳು ಉಂಟುಮಾಡಿದ ಪರಿಣಾಮದಿಂದಾಗಿ ಸಮಾಜವು ಇಡಿಯಾಗಿ ಪುನರ್ ನಿರೂಪಣೆಗೆ ಒಳಗಾಗುವ ಒತ್ತಡವನ್ನು ಎದುರಿಸಿತು. ಸಮಾಜದ ಬೇರೆ ಬೇರೆ ಘಟಕಗಳೂ ಪುನರ್ ವ್ಯಾಖ್ಯಾನಕ್ಕೆ ಒಳಗಾಗಬೇಕಾಯಿತು. ಹಾಗೆ ಆಗುವಾಗಲೂ ತನ್ನ ಅಸ್ಮಿತೆಗಳನ್ನು ಕಳೆದುಕೊಳ್ಳದೆ, ಆಧುನಿಕತೆ ನೀಡಿದ ಪರಿಕರಗಳೊಂದಿಗೂ ಸಂವಹನವನ್ನು ಸಾಧ್ಯವಾಗಿಸಿಕೊಳ್ಳುವ ಜಾಣ್ಮೆಯನ್ನು ಕನ್ನಡ ಕಥನ ಸಮುದಾಯ ತೋರಿತು. ಹೀಗೆ ಪುನರ್ ನಿರೂಪಣೆಗೆ ಒಳಗಾದ ಧರ್ಮ, ಶಿಕ್ಷಣ, ಮಹಿಳೆ, ಜಾತಿ, ಕುಟುಂಬವನ್ನು ಕುರಿತು ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ. ಸಮಾಜದಲ್ಲಿ ಬದಲಾಗಬೇಕಾದ ಒತ್ತಡವನ್ನು ಎದುರಿಸಿದ್ದು ಈ ಸಂಗತಿಗಳು ಮಾತ್ರವೆಂತಲ್ಲ. ಇವುಗಳ ಮಾದರಿಯನ್ನು ಗಮನಿಸಿ ಅಂದಿನ ಸಮಾಜದ ಸ್ಥಿತ್ಯಂತರದ ಒತ್ತಡವನ್ನು ಅರಿಯುವ ಪ್ರಯತ್ನವನ್ನು ಮಾಡುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ವಸಾಹತುಶಾಹಿ ಅನುಭವವು ಆಧುನಿಕ ಕನ್ನಡ ಕಥನ ಸಾಹಿತ್ಯವನ್ನು ಹೊಸ ಪರಿಪ್ರೇಕ್ಷದಲ್ಲಿ ನೋಡಲು ಅನುವು ಮಾಡಿಕೊಟ್ಟಿತು. ಆಧುನಿಕ ಕನ್ನಡ ಕಥನ ಸಾಹಿತ್ಯದ ಆರಂಭಕಾಲದಿಂದ ಆನಂತರದ ಎಲ್ಲಾ ಕಾಲಘಟ್ಟದ ಲೇಖಕರನ್ನು ಇದು ಒಂದಲ್ಲಾ ಒಂದು ಬಗೆಯಲ್ಲಿ ಕಾಡಿದೆ. ಇಡಿಯಾಗಿ ಕನ್ನಡ ಕಥನ ಸಾಹಿತ್ಯದ ಸಮಗ್ರ ಅವಲೋಕನದ ಮೂಲಕ ವಸಾಹತುಶಾಹಿ ಅನುಭವಕ್ಕೆ ಬಂದ ಪ್ರತಿಕ್ರಿಯೆಗಳನ್ನು ಒಟ್ಟುಮಾಡುವುದು ಅಧ್ಯಯನದ ಅನುಕೂಲದ ದೃಷ್ಟಿಯಿಂದ ಕಷ್ಟವಾದುದು. ಒಂದೊಂದು ಕೃತಿಯೂ ಒಂದೊಂದು ರೀತಿ ಪ್ರತಿಕ್ರಿಯಿಸಿರುವ ಸಾಧ್ಯತೆಯಿದೆ ಅಥವಾ ಒಂದು ಕೃತಿಯೇ ಎರಡು ಬಗೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವ ಸಾಧ್ಯತೆಯೂ ಇದೆ. ಯಾವ ಕೃತಿಯ ಪ್ರತಿಕ್ರಿಯೆಯೂ ಆತ್ಯಂತಿಕವೆಂದಾಗಲೀ, ಇಡೀ ಕರ್ನಾಟಕವನ್ನು ಪ್ರತಿನಿಧಿಸುತ್ತದೆಂತಾಗಲೀ ಭಾವಿಸುವುದು ಸಾಧ್ಯವಿಲ್ಲ. ಅದು ಆ ಕೃತಿಯ ಪ್ರತಿಕ್ರಿಯೆ. ಅದರ ಹಿಂದಿನ ತಾತ್ವಿಕತೆಯನ್ನು ಗ್ರಹಿಸುವ, ಒಂದಕ್ಕೊಂದು ಹೋಲಿಸುವ ಪ್ರಯತ್ನ ಮಾಡಬಹುದಷ್ಟೆ. ಪ್ರಸ್ತುತ ಅಧ್ಯಯನದಲ್ಲಿ ಕೆಲವು ಪಠ್ಯಗಳನ್ನು ಆಯ್ದುಕೊಂಡು ಆ ಪಠ್ಯದ ಪ್ರತಿಕ್ರಿಯೆಯನ್ನು ಪರಿಶೀಲಿಸಲಾಗಿದೆ. ಕೃತಿಯ ಗ್ರಹಿಕೆ ಮತ್ತು ತಾತ್ವಿಕತೆಯನ್ನು ಗಮನಿಸಿ ಕನ್ನಡ ಕಥನ ಪರಂಪರೆಯು ವಸಾಹತುಶಾಹಿಗೆ ಬಂದ ಪ್ರತಿಕ್ರಿಯೆಗಳ ಕೆಲವು ಮಾದರಿಗಳನ್ನು ನೋಡುವ ಪ್ರಯತ್ನ ಮಾಡಲಾಗಿದೆ.

ಈ ಅಧ್ಯಯನದಲ್ಲಿ ಯಾವುದೇ ಒಂದು ಪ್ರಕಾರದ ಸಾಹಿತ್ಯಕೃತಿಯನ್ನು ಬಳಸಿಕೊಂಡಿಲ್ಲ. ಅಗತ್ಯಕ್ಕನುಸಾರವಾಗಿ ಕತೆ, ಕಾದಂಬರಿಗಳನ್ನು ಬಳಸಿಕೊಳ್ಳಲಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯ ಕಾಲಘಟ್ಟದ ಕೆಲವು ಪ್ರಮುಖ ಲೇಖಕರ ಕೆಲವು ಕೃತಿಗಳ ಜೊತೆಗೆ ನವೋದಯ ಕಾಲದ ಪ್ರಮುಖ ಲೇಖಕರ ಕೃತಿಗಳನ್ನು ಮುಖ್ಯ ಆಕರವಾಗಿ ಬಳಸಿಕೊಳ್ಳಲಾಗಿದೆ.

ಈ ಸಂಪ್ರಬಂಧದ ಎರಡನೆಯ ಅಧ್ಯಾಯದಲ್ಲಿ ವಸಾಹತುಶಾಹಿ ಅನುಭವಕ್ಕೆ ಬಂದ ಕಥನದ ಪ್ರತಿಕ್ರಿಯೆಯನ್ನು ಗಮನಿಸಲಾಗಿದೆ. ಯಾವೊಂದು ಪಠ್ಯದ ಪ್ರತಿಕ್ರಿಯೆಯೂ ಒಂದು ಚೌಕಟ್ಟಿಗೆ ಮಾತ್ರ ಸೀಮಿತವಾದುದಾಗಿರುವುದಿಲ್ಲ. ಅಂದರೆ ಇಲ್ಲಿ ಆರಿಸಿಕೊಂಡ ಕಥನಗಳ ಪ್ರತಿಕ್ರಿಯೆ ರಾಜಕೀಯಕ್ಕೆ ಸಂಬಂಧಿಸಿದ್ದು ಮಾತ್ರವಲ್ಲ. ಆದರೆ ಅಧ್ಯಯನದ ಅನುಕೂಲ ಹಾಗೂ ಕೃತಿಯ ಹಿಂದಿನ ಮುಖ್ಯ ಗ್ರಹಿಕೆಯನ್ನು ಗಮನಿಸಿ ಹೀಗೆ ವಿಭಾಗಿಸಿಕೊಳ್ಳಲಾಗಿದೆ.

'ರಾಷ್ಟ್ರ'ದ ಕಲ್ಪನೆ ವಸಾಹತುಶಾಹಿ ಪ್ರಭುತ್ವದ ಎರವಲು ಕಲ್ಪನೆಯಾದರೂ ಅದರ ಪ್ರಭಾವ ಅಘಾದವಾದುದು. ಇದು ಇಲ್ಲಿಯ ಜನಜೀವನವನ್ನು ಇಡಿಯಾಗಿ ಆವರಿಸಿಕೊಂಡು ಬೇರೆ ಬೇರೆ ರೀತಿಯ ಪ್ರತಿಫಲನವನ್ನು ಉಂಟುಮಾಡಿತು. ವಿದ್ಯಾವಂತ ವರ್ಗಕ್ಕೆ ನಮ್ಮ ನಾಡನ್ನು 'ರಾಷ್ಟ್ರ'ವಾಗಿಸುವ ಹಂಬಲದ ಜೊತೆಗೆ ಪರಕೀಯತೆಯಿಂದ ಬಿಡುಗಡೆ ಪಡೆಯುವ ಸಾಧ್ಯತೆಯೂ ಗೋಚರವಾಯಿತು. ಇದು ರಾಷ್ಟ್ರೀಯತೆಯ ಪರಿಕಲ್ಪನೆಯು ವಿಭಿನ್ನ ಮಗ್ಗಲುಗಳಲ್ಲಿ ವಿಸ್ತರಿಸಿಕೊಳ್ಳುವಂತೆ ಮಾಡಿತು. ಒಂದು ಬಲಿಷ್ಟ ರಾಷ್ಟ್ರವಾಗಲು ಇರಬೇಕಾದ ಲಕ್ಷಣಗಳನ್ನು ಪೂರೈಸಿಕೊಳ್ಳಲು ಅಂದಿನ ಸಮುದಾಯ ಶ್ರಮಿಸಿತು.

ರಾಷ್ಟ್ರಕ್ಕೆ ಇತಿಹಾಸದ ಅಗತ್ಯವಿದೆ ಎಂಬುದೂ ಒಂದು ಪ್ರಮುಖ ಲಕ್ಷಣವಾಗಿತ್ತು. ಈ ಹಿನ್ನೆಲೆಯಲ್ಲಿಯೇ ಅನೇಕರು ಇತಿಹಾಸಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದರು. ಹಾಗೆ ಮಾಡುವಾಗ ಅವರು ರಾಷ್ಟ್ರದ ಹೆಗ್ಗಳಿಕೆಯನ್ನು ಹೆಚ್ಚಿಸಿಕೊಳ್ಳಲು ಇತಿಹಾಸವನ್ನು ಬಳಸಿಕೊಂಡ ರೀತಿಯನ್ನು ಅನುಸರಿಸಿದ ಕ್ರಮಗಳನ್ನು ಗಮನಿಸಲಾಗುವುದು. ಪಾಶ್ಚಾತ್ಯ ಪ್ರಭುತ್ವ ನೀಡಿದ ಪರಿಕರವನ್ನು ಒಗ್ಗಿಸಿಕೊಂಡು, ಅದರ ಮೂಲಕವೇ ಪಾಶ್ಚಾತ್ಯ ಪ್ರಭುತ್ವಕ್ಕೆ ಉತ್ತರವನ್ನು ನೀಡಿದ ಕ್ರಮವನ್ನು ಇಲ್ಲಿ ನೋಡಬಹುದು. ಇತಿಹಾಸವನ್ನು ಬಳಸಿಕೊಳ್ಳುವಲ್ಲಿ ಕತೆಗಾರರದು ಬೇರೆಯದೇ ಮಾದರಿಯನ್ನು ಅನುಸರಿಸುತ್ತಾರೆ. ಇತಿಹಾಸದಲ್ಲಿ ಆಗಿಹೋದ ಘಟನೆಗಳ ಮೂಲಕ ವರ್ತಮಾನದಲ್ಲಿ ಪ್ರೇರಣೆ ಪಡೆಯುವ ಈ ಮಾದರಿಗೆ ಕನ್ನಡದಲ್ಲಿ ಅನೇಕ ಉದಾಹರಣೆಗಳು ದೊರೆಯುತ್ತವೆ.

ಕನ್ನಡವು ಭಾರತರಾಷ್ಟ್ರದ ಭಾಗವಾದಾಗ ಪರಕೀಯ ಆಡಳಿತವಾದ ಬ್ರಿಟಿಷರಿಂದ ಬಿಡುಗಡೆ ಪಡೆದು ಪಾಶ್ಚಾತ್ಯ ಪರಂಪರೆಯಿಂದ ಪಾರಾಗುವ ಆಶಯನ್ನು ಹೊಂದಿದ್ದರೆ ಭಾರತದ ಒಳಗಡೆ ಅದು ಬೇರೆ ಬೇರೆ ಶಕ್ತಿಯೊಂದಿಗೆ ಮುಖಾಮುಖಿಯಾಗಬೇಕಿತ್ತು. ತನ್ನ ಸುತ್ತಲೂ ಇರುವ ಇತರ ಭಾಷಿಕ ಸಮುದಾಯಗಳೆದುರು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವ ತುರ್ತು ಕನ್ನಡಕ್ಕಿತ್ತು. ಕನ್ನಡ ಕಥನ ಸಾಹಿತ್ಯವನ್ನು ಎಲ್ಲ ಬಗೆಯಿಂದಲೂ ಬಲಗೊಳಿಸಿ ಇತರ ಭಾಷೆ ಮತ್ತು ಪಾಶ್ಚಾತ್ಯ ಜಗತ್ತಿಗೆ ಕೊಂಡಿಯಾಗಿದ್ದ ಇಂಗ್ಲಿಷ್ ಭಾಷೆಯೊಂದಿಗೆ ಸಮನಾಗಿ ನಿಲ್ಲಿಸುವ ತುರ್ತ ಕೂಡ ಇತ್ತು. ಇಡಿಯ ಕನ್ನಡ ಪ್ರದೇಶವೇ ಛಿದ್ರೀಕರಣಕ್ಕೆ ಒಳಗಾಗಿದ್ದರಿಂದ ಒಂದೊಂದು ಭಾಗವು ಬೇರೆ ಬೇರೆ ಭಾಷಿಕ, ಸಾಮುದಾಯಿಕ ಶಕ್ತಿಯ ಪ್ರಭಾವಕ್ಕೊಳಗಾಗಿತ್ತು. ಕನ್ನಡ ಕಥನ ಪರಂಪರೆಯು ತನ್ನ ಚಹರೆಯನ್ನು ರೂಪಿಸಿಕೊಳ್ಳುವಾಗ ಈ ಎಲ್ಲ 'ಹೊರಗಿನ' ಶಕ್ತಿಗಳ ಪ್ರಭಾವಕ್ಕೂ ಒಳಗಾಗಬೇಕಾಯಿತು. ಹಾಗಾಗಿಯೇ ವಸಾಹತುಶಾಹಿ ಸಂದರ್ಭದಲ್ಲಿ ರೂಪಗೊಂಡ ಕನ್ನಡ ಬಹುಮುಖೀ ನೆಲೆಯಿಂದ ಆಯ್ದುಕಟ್ಟಿದ, ಎಚ್ಚರಿಕೆಯಿಂದ ರೂಪಿಸಿದ ಭಾಷಿಕ ಸಮುದಾಯವಾಯಿತು.

ವಸಾಹತುಶಾಹಿ ವ್ಯವಸ್ಥೆ ವಿದ್ಯಾವಂತ ಸಮುದಾಯ ಧಾರ್ಮಿಕತೆ; ರೂಢಿ, ಆಚರಣೆಗಳ ವಿಷಯದಲ್ಲಿ ಕ್ರಿಯಾತ್ಮಕ ಆತ್ಮಶೋಧನೆಗೆ ತೊಡಗುವಂತೆ ಮಾಡಿತು. ಕ್ರಿಶ್ಚಿಯನ್ ಧರ್ಮದ ಪ್ರಭಾವ, ಸಮಾಜ ಸುಧಾರಣಾ ಚಳುವಳಿಗಳು, ಧರ್ಮ ಮತ್ತು ಸಮಾಜದ ನಡುವೆ ಸಾಧ್ಯವಾಗಬೇಕಿದ್ದ ಹೊಸ ಸಂಬಂಧ ಈ ಸಂಗತಿಗಳು ಧಾರ್ಮಿಕತೆಯ ಪುನರ್ ನಿರೂಪಣೆಗೆ ಒತ್ತಾಯಿಸಿತು. ಕಥನ ಸಾಹಿತ್ಯ ಇದಕ್ಕೆ ಸ್ಪಂದಿಸುವಾಗ ಒಂದೊಂದು ಕೃತಿಯು ಒಂದೊಂದು ನೆಲೆಯಿಂದ ಪ್ರತಿಕ್ರಿಯಿಸಲು ಸಾಧ್ಯವಿದೆ. 'ಇಂದಿರಾಬಾಯಿ' ವ್ಯಕ್ತಿಯ ನೈತಿಕ ಧರ್ಮದ ಪ್ರತಿಪಾದನೆಗೆ ಹೆಚ್ಚು ಒತ್ತು ಕೊಟ್ಟಿದೆ. ಇದಕ್ಕೆ ಕ್ರಿಶ್ಚಿಯನ್ ಧರ್ಮದ ತಾತ್ವಿಕತೆಯಿಂದ ಬೆಂಬಲವನ್ನು ಪಡೆದಿದೆ. 'ನಭಾ' ಮತ್ತು 'ವಿರಾಗೀತೆ', ಮಹಿಳೆಯರನ್ನು ರಾಷ್ಟ್ರೀಯತೆಯ ಭಾಗವಾಗಿಸಲು ದುಡಿಯುತ್ತವೆ. ಆರ್ಯಧರ್ಮವನ್ನು ಬೆಂಬಲಿಸುವ ಈ ಕೃತಿಗಳು 'ಆರ್ಯಸ್ತ್ರೀ' ಎನ್ನುವ ಆದರ್ಶವನ್ನು ಮುಂದಿಟ್ಟು ಧಾರ್ಮಿಕ ರೂಢಿ, ಆಚರಣೆಯ ಚೌಕಟ್ಟನ್ನೂ ಹಾಕಿಕೊಂಡು ಮಹಿಳೆಯನ್ನು ಆಧುನಿಕ ಶಿಷ್ಟಾಚಾರಕ್ಕೆ ಒಗ್ಗಿಸುವ ಕೆಲಸವನ್ನು ಮಾಡುತ್ತವೆ. 'ಡೂಬಾಯಿ ಪಾದ್ರಿಯ ಒಂದು ಪತ್ರ' ಕೃತಿಯು ಧರ್ಮ ಮತ್ತು ಆಡಳಿತಕ್ಕೆ ಇರುವ ಸಂಬಂಧವನ್ನು ಕಾಣಿಸುತ್ತದೆ. ಕ್ರಿಶ್ಚಿಯನ್ ಧರ್ಮದ ಪ್ರಭಾವದಿಂದಾಗಿಯೇ ಸನಾತನತೆಯ ಕುರಿತು ಎಚ್ಚರ ಮೂಡಿರುವುದನ್ನು ಕೃತಿಯಲ್ಲಿ ಕಾಣಬಹುದು. 'ಧರ್ಮ'ವು ಹೆಚ್ಚು ಸಂಕೀರ್ಣಗೊಳ್ಳುತ್ತಾ ಹೋಗಿರುವುದನ್ನು ಇಲ್ಲಿ ಪರಿಶೀಲಿಸಲಾಗುವುದು.

ವಸಾಹತುಶಾಹಿಗೆ ಬಂದ ಸಾಮಾಜಿಕ ಪ್ರತಿಕ್ರಿಯೆಗಳನ್ನು ಪರಿಶೀಲನೆಗೆ ಎತ್ತಿಕೊಳ್ಳಲಾಗುವುದು. ಇಲ್ಲಿ ಆಧುನಿಕ ಶಿಕ್ಷಣ, ಲೈಂಗಿಕ ರಾಜಕಾರಣ, ಜಾತಿ ಮತ್ತು ಆಧುನಿಕತೆಯನ್ನು ಕುರಿತು ಚರ್ಚಿಸಲಾಗುವುದು.

ಆಧುನಿಕ ಶಿಕ್ಷಣವೇ ವಸಾಹತುಶಾಹಿಯ ಉತ್ಪನ್ನ. ಕನ್ನಡದ ಲೇಖಕರು ಬೇರೆ ಬೇರೆ ಬಗೆಯಲ್ಲಿ ಶಿಕ್ಷಣವನ್ನು ಪರಿಭಾವಿಸಿಕೊಂಡಿದ್ದಾರೆ. ಇವರ ಶಿಕ್ಷಣದ ಕುರಿತ ಚಿಂತನೆಗಳು ಬರವಣಿಗೆಗೆ ಸೀಮಿತವಾಗದೆ ಪ್ರಯೋಗಗಳಿಗೂ ಒಳಗಾಗಿದೆ. ಶಿಕ್ಷಣ ನಿರ್ದಿಷ್ಟ ವ್ಯವಸ್ಥೆಗೆ ಒಳಪಟ್ಟು, ಸ್ಪಷ್ಟ ಉದ್ದೇಶ ಮತ್ತು ಗುರಿಗಳೊಂದಿಗೆ ಜಾರಿಯಾಗುತ್ತಿತ್ತು. ಶಿಕ್ಷಣಕ್ಕೆ ಸಂಬಂಧಿಸಿದ ಹೊಸ ಚಿಂತನೆಗಳು, ಪ್ರಯೋಗಗಳೂ ಪಾಶ್ಚಾತ್ಯ ಬೆಳಕಿಂಡಿಯ ಮೂಲಕವೇ ಹರಿದು ಬರುತ್ತಿತ್ತು. ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಪರಿಕರಗಳನ್ನು ಪ್ರಯೋಗಗಳನ್ನು ವಸಾಹತುಶಾಹಿ ಆಡಳಿತವೇ ಪರಿಚಯಿಸುತ್ತಿತ್ತು. ಸಾಮ್ರಾಜ್ಯ ವಿಸ್ತರಣೆ ಮತ್ತು ಸ್ಥಾಪನೆಗೆ ಶಿಕ್ಷಣವನ್ನು ಬಳಸಿಕೊಳ್ಳುತ್ತಿತ್ತು. ಇದೆಲ್ಲದರ ಅರಿವಿನೊಂದಿಗೇ ಕನ್ನಡ ಕಥನದಲ್ಲಿ ಕೆಲವರು 'ಶಿಕ್ಷಣ'ಕ್ಕೆ ಗಂಭೀರ ಪ್ರತಿಕ್ರಿಯೆಯನ್ನು ದಾಖಲಿಸಿದ್ದಾರೆ. ಹೀಗೆ ಬಂದ ಪ್ರತಿಕ್ರಿಯೆಯಲ್ಲಿ ನಾಲ್ಕು ಮುಖ್ಯ ಮಾದರಿಗಳನ್ನು ಇಲ್ಲಿ ಚರ್ಚಿಸಲಾಗುವುದು.

ಅನೇಕ ಲೇಖಕರು ರಾಷ್ಟ್ರೀಯ ಚಳುವಳಿಯ ತೀವ್ರ ಪ್ರಭಾವಕ್ಕೆ ಒಳಗಾಗಿದ್ದರು. ಅನೇಕರು ಶಿಕ್ಷಣದ ಬೇಕು ಬೇಡಗಳನ್ನು ಈ ಹಿನ್ನೆಲೆಯಲ್ಲಿಯೇ ನೋಡುತ್ತಾರೆ. ರಾಷ್ಟ್ರೀಯತೆಯನ್ನು ಉಜ್ವಲಗೊಳಿಸಿ, ಪರಕೀಯತೆಯಿಂದ ಬಿಡುಗಡೆಯನ್ನು ಪಡೆಯಲು ಶಿಕ್ಷಣವನ್ನು ಅಸ್ತ್ರವಾಗಿ ಬಳಸಿಕೊಂಡರು. ಶಿಕ್ಷಣವನ್ನು ರಾಷ್ಟ್ರೀಯ ಚಳುವಳಿಯ ಭಾಗವನ್ನಾಗಿಯೇ ಇವರು ನೋಡಿದರು.

ಗ್ರಾಮೀಣ ಪ್ರದೇಶ ಮತ್ತು ಶೂದ್ರ ಸಮುದಾಯದ ನೆಲೆಯಿಂದ ಹೊರಡುವ ಕುವೆಂಪು ಅವರ ಚಿಂತನೆ ಶಿಕ್ಷಣವನ್ನು ಬಿಡುಗಡೆಯ ದಾರಿಯಾಗಿ ಗ್ರಹಿಸಿದೆ. ಎಲ್ಲ ರೀತಿಯ ಮೌಢ್ಯ, ಶೋಷಣೆಯಿಂದ ಬಿಡುಗಡೆ ಪಡೆದು ವೈಚಾರಿಕ ಬೆಳಕಿನಲ್ಲಿ ಮುನ್ನಡೆಯಲು ಸಾಧ್ಯವಾಗುವುದು ಶಿಕ್ಷಣದಿಂದ ಮಾತ್ರ ಎಂಬುದು ಇವರ ಗಾಢ ನಂಬಿಕೆ. ಹಾಗಾಗಿಯೇ ಆಧುನಿಕ ಶಿಕ್ಷಣವನ್ನು ಇವರು ಅತ್ಯಂತ ಆದರದಿಂದ ಕಾಣುತ್ತಾರೆ.

ಹೊಸ ಹೊಸ ಜ್ಞಾನಶಿಸ್ತುಗಳನ್ನು ಪರಿಣಾಮಕಾರಿಯಾಗಿ ಹೇಗೆ ಹೇಗೆ ಕಲಿಸಬಹುದು. ಆ ವಿಷಯವನ್ನು ಕಲಿಯುವುದರ ಅಗತ್ಯವೇನು ಎನ್ನುವುದನ್ನು ಪರಿಚಯಿಸುವ ಕೆಲಸವನ್ನು ಇವರು ಮಾಡುತ್ತಾರೆ. ಆಧುನಿಕ ಶಿಕ್ಷಣ ನೀಡಿದ ಯಾವ ಪರಿಕರವನ್ನೂ ನಿರಾಕರಿಸದೆ ಅವುಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದರ ಕುರಿತು ಇವರ ಗಮನವಿದೆ.

ಶಿವರಾಮಕಾರಂತರು ವಸಾಹತು ಪ್ರಣೀತ ಆಧುನಿಕ ಶಿಕ್ಷಣವನ್ನು ಸಂಪೂರ್ಣವಾಗಿ ನಿರಾಕರಿಸಿ ಅದಕ್ಕೊಂದು ಪರ್ಯಾಯವನ್ನಿಡುವ ಕೆಲಸವನ್ನು ಮಾಡುತ್ತಾರೆ. ಕಲಿಸುವ ವಿಷಯ, ಕಲಿಸುವ ವಿಧಾನ, ಕಲಿಯುವಿಕೆಯ ಆತ್ಯಂತಿಕ ಉದ್ದೇಶ ಏನಾಗಿರಬೇಕು ಎಂಬುದರ ಕುರಿತು ಇವರು ಪ್ರಯೋಗಗಳನ್ನು ನಡೆಸಿದರು. ವಸಾಹತು ಪ್ರಣೀತ ಶಿಕ್ಷಣ ನೀಡಿದ ಪರಿಕರಗಳನ್ನೆಲ್ಲ ನಿರಾಕರಿಸುವ ಇವರು ಆ ಮೂಲಕ ಶಿಕ್ಷಣದ ಹಿಂದಿದ್ದ ಸಾಮ್ರಾಜ್ಯಶಾಹಿ ಉದ್ದೇಶವನ್ನೂ ನಿರಾಕರಿಸುತ್ತಾರೆ. ಬದಲಿಗೆ ಬೇರೆ ಬೇರೆ ದೇಶಗಳ ಪ್ರಯೋಗಗಳನ್ನು ಗಮನದಲ್ಲಿಸಿಕೊಂಡು ಹೊಸ ಶೈಕ್ಷಣಿಕ ಕ್ರಮವನ್ನು ಶೋಧಿಸುತ್ತಾರೆ. ಅದರ ಪ್ರಯೋಗಗಳನ್ನು ಮಾಡುತ್ತಾರೆ. ಇವೆಲ್ಲ ಮಾದರಿಗಳು ಆನಂತರದ ದಿನಗಳಲ್ಲಿಯೂ ಸಕ್ರಿಯವಾಗಿ ಮುಂದುವರೆಯಿತು ಎಂಬುದು ಮಹತ್ವದ ಸಂಗತಿ.

ಲಿಂಗ ರಾಜಕಾರಣ ಎನ್ನುವ ಭಾಗದಲ್ಲಿ ಸ್ತ್ರೀತ್ವವು ಮರುವ್ಯಾಖ್ಯಾನಕ್ಕೆ ಒಳಗಾದ ಬಗೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗುವುದು. ತಿರುಮಲಾಂಬ ಅವರ ಕೃತಿಗಳನ್ನು ಇಲ್ಲಿ ಮುಖ್ಯ ಆಕರವಾಗಿ ಬಳಸಿಕೊಳ್ಳಲಾಗಿದೆ. 'ಕುಟುಂಬ' ಮತ್ತು 'ಸ್ತ್ರೀ ವಿದ್ಯಾಭ್ಯಾಸ' ಈ ಎರಡು ಸಂಗತಿಗಳ ಮೂಲಕ ವಸಾಹತು ಕಾಲಘಟ್ಟವು ಮಹಿಳಾ ಪ್ರಶ್ನೆಯನ್ನು ಹೇಗೆ ನಿಭಾಯಿಸಿಕೊಂಡಿತು ಎಂಬುದನ್ನು ಚರ್ಚಿಸಲಾಗುವುದು.

ಸಮಾಜದ ಮೂಲ ಘಟಕವಾದ ಕುಟುಂಬದ ಸ್ವರೂಪವೂ ಬದಲಾದ ಸನ್ನಿವೇಶದಲ್ಲಿ ಹೊಸ ಸ್ಥಾನ ನಿರ್ದೇಶನಕ್ಕೆ ಒಳಗಾಗಬೇಕಾಯಿತು. ಮಹಿಳೆಯೂ ಇದರಿಂದ ಹೊರತಾಗಲಿಲ್ಲ. ಅಲ್ಲದೆ ಹೊಸ ಕಾಲದ ಒತ್ತಡಗಳು ಮಹಿಳೆಯ ಸ್ಥಾನಮಾನಗಳನ್ನು ಮರುರೂಪಿಸಲು ಒತ್ತಾಯಿಸಿತ್ತು. ಆ ಸಂದರ್ಭದಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಆದ ಬದಲಾವಣೆಗಳನ್ನು ಇಲ್ಲಿ ವಿಶ್ಲೇಷಿಸಲಾಗುವುದು. ಎಲ್ಲ ಸಮುದಾಯಗಳನ್ನೂ ವಸಾಹತುಶಾಹಿ ಅನುಭವ ಏಕಕಾಲಕ್ಕೆ ಪ್ರಭಾವಿಸಿಲ್ಲ. ಪ್ರಭಾವಕ್ಕೆ ಒಳಗಾಗದ ಸಮುದಾಯಗಳು ಮಹಿಳೆಯರನ್ನು ಹೇಗೆ ಗ್ರಹಿಸಿದ್ದವು ಎಂಬುದನ್ನು ಇಲ್ಲಿ ಗಮನಿಸಲಾಗುವುದು.

ವಸಾಹತುಶಾಹಿಯ ಉಪ ಉತ್ಪನ್ನವಾಗಿ ಬಂದ 'ಆಧುನಿಕತೆ'. 'ರಾಷ್ಟ್ರದ' ತಾತ್ವಿಕ ಗ್ರಹಿಕೆಯೊಂದಿಗೆ ಆಧುನಿಕ ಕನ್ನಡದ ಮೊದಲ ಕಾದಂಬರಿಗಳ ಅಧ್ಯಯನವನ್ನು ಶಿವರಾಮ ಪಡಿಕ್ಕಲ್ ಮಾಡಿದ್ದಾರೆ. ವಸಾಹತುಶಾಹಿ ಭಾರತದ ಭಾಗವಾದ

ಕರ್ನಾಟಕದ ಚರಿತ್ರೆ ಮತ್ತು ಕನ್ನಡದ ಮೊದಲ ಕಾದಂಬರಿಗಳ ನಿರ್ಮಾಣದ ನಡುವಿನ ಸಂಬಂಧವನ್ನು ಇವರು ಇಲ್ಲಿ ಅನ್ವೇಷಿಸುತ್ತಾರೆ. ಅಧ್ಯಯನಕ್ಕೆ ಕಾದಂಬರಿ ಪ್ರಕಾರವನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಇವರು ಕೆಲವು ಖಚಿತ ತೀರ್ಮಾನಗಳಿಗೆ ಬರುತ್ತಾರೆ. ಕನ್ನಡ ಕಾದಂಬರಿ ಆಧುನಿಕ ವಿದ್ಯಾವಂತ ವರ್ಗದ ಅಸ್ಮಿತೆಯ ಹುಡುಕಾಟದ ಕಥನ ಎಂದು ಇವರು ಭಾವಿಸುತ್ತಾರೆ. ತಮ್ಮ 'ನಾಡು ನುಡಿಯ ರೂಪಕ'ದಲ್ಲಿ ವಸಾಹತುಶಾಹಿ ಆಧುನಿಕತೆಯು ಕರ್ನಾಟಕದಲ್ಲಿ ತಲೆದೋರಿದ ರೀತಿ, ರಾಷ್ಟ್ರೀಯ ಮತ್ತು ಭಾಷಿಕ ಅಸ್ಮಿತೆಗಳು ರೂಪುಗೊಂಡ ಬಗೆಯನ್ನು ಕಾದಂಬರಿಗಳ ಅಧ್ಯಯನದ ಮೂಲಕ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ.

ನಟರಾಜ್ ಹುಳಿಯಾರ್‌ರವರು "ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ" ಎನ್ನುವ ಸಂಶೋಧನಾ ಕೃತಿಯಲ್ಲಿ ವಸಾಹತು ಅನುಭವಕ್ಕೆ ಒಳಗಾದ ಎರಡು ಭಿನ್ನ ಸಂಸ್ಕೃತಿ, ಹಿನ್ನಲೆಯನ್ನು ಹೊಂದಿರುವ ದೇಶಗಳ ಸಾಹಿತ್ಯ ಕೃತಿಯನ್ನು ತೌಲನಿಕವಾಗಿ ನೋಡುತ್ತಾರೆ. ಆ ಮೂಲಕ ವಸಾಹತುಶಾಹಿ ಆಡಳಿತದ ಪರಿಣಾಮಗಳನ್ನು ಅರಿಯುವ ಪ್ರಯತ್ನ ಮಾಡುತ್ತಾರೆ. ವಸಾಹತೀಕರಣ, ನಿರ್ವಸಾಹತೀಕರಣದ ಸಿದ್ಧಾಂತಗಳ ಪರಿಶೀಲನೆಯ ಮೂಲಕ ತಮ್ಮ ಸಂಶೋಧನೆಗೆ ತಾತ್ವಿಕ ತಳಹದಿಯನ್ನು ಹಾಕಿಕೊಳ್ಳುತ್ತಾರೆ. ಎರಡು ದೇಶಗಳಲ್ಲಿಯೂ ಆದ ಆಧುನಿಕತೆ ಮತ್ತು ಪರಂಪರೆಯ ನಡುವಿನ ಮುಖಾಮುಖಿಯ ನೆಲೆಗಳನ್ನು ಅರಿಯುವ ಮೂಲಕ ವಸಾಹತುಶಾಹಿಯ ಪರಿಣಾಮಗಳನ್ನು ಗ್ರಹಿಸುತ್ತಾರೆ.

ಆಧುನಿಕ ಕನ್ನಡದ ಬಹುಮುಖ್ಯ ಲೇಖಕರಲ್ಲಿ ಒಬ್ಬರಾದ ಶಿವರಾಮಕಾರಂತರ ಕೃತಿಗಳನ್ನು ಇಟ್ಟುಕೊಂಡು ಕೆ.ಕೇಶವಶರ್ಮ ಅವರು ಅಧ್ಯಯನ ನಡೆಸಿದ್ದಾರೆ. ಕನ್ನಡದ ಅದರಲ್ಲಿಯೂ ಮುಖ್ಯವಾಗಿ ದಕ್ಷಿಣ ಕನ್ನಡದಲ್ಲಿ ವಸಾಹತುಶಾಹಿ ಕಾಲಘಟ್ಟದಲ್ಲಾದ ಸ್ಥಿತ್ಯಂತರಗಳನ್ನು ಕಾರಂತರು ಗ್ರಹಿಸಿರುವ ಕ್ರಮಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಮಾಜವು ಬದಲಾವಣೆಯನ್ನು ಸ್ವೀಕರಿಸಿದ, ನಿರಾಕರಿಸಿದ, ಒಗ್ಗಿಸಿಕೊಂಡ ಬಗೆಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದ ಮೂಲಕ ಶೋಧಿಸುವ ಪ್ರಯತ್ನವನ್ನು ಈ ಅಧ್ಯಯನವು ಮಾಡಿದೆ. ಅವರದೇ ಪಡು – ಮೂಡು ಕೃತಿಯು ವಸಾಹತುಶಾಹಿ ಅನುಭವದ ಕುರಿತಂತೆ ವಿಶೇಷ ಅಧ್ಯಯನವಿದೆ.

ವಸಾಹತುಕಾಲಘಟ್ಟದ ಸನ್ನಿವೇಶ, ನಡೆಯುತ್ತಿದ್ದ ಚಳುವಳಿ, ರಾಷ್ಟ್ರೀಯ ಮಟ್ಟದ ಪ್ರಭಾವಗಳು, ಸ್ಥಳೀಯ ಒತ್ತಡ ಇವೆಲ್ಲವನ್ನು ಗಮನಿಸಿ ಇತಿಹಾಸದ ಮೂಲಕ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿ ಅಧ್ಯಯನ ನಡೆಸುವ ಮಾದರಿಯೂ ಇದೆ. ಸಿ.ಆರ್. ಗೋವಿಂದರಾಜು ಅವರ 'ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ', ರಾಜಾರಾಮಹೆಗಡೆಯವರ 'ಗತಕಥನ'ದಲ್ಲಿಯ ಲೇಖನಗಳು ಈ ಮಾದರಿಯವು. ಆ ಹೊತ್ತಿನ ಪ್ರತಿಕ್ರಿಯೆಯಾಗಿ ಅನೇಕ ರೂಪಕಗಳು ಪ್ರತೀಕಗಳು ಹುಟ್ಟಿಕೊಂಡವು. ಇವುಗಳ ಅಧ್ಯಯನದ ಮೂಲಕ ಅಂದಿನ ಸನ್ನಿವೇಶವನ್ನು ಅರಿಯುವುದಲ್ಲದೆ, ಕೋಮುವಾದದಂತಹ ಬಿಕ್ಕಟ್ಟಿನ ಬೀಜರೂಪ ಆ ರೂಪಕಗಳಲ್ಲಿ ಹೇಗೆ ಹುದುಗಿತ್ತು ಎಂಬುದರ ಅಧ್ಯಯನಗಳೂ ನಡೆಯುತ್ತಿವೆ. ಗೋವಿಂದರಾಜು ಅವರ 'ಕನ್ನಡಮ್ಮ' ಇದಕ್ಕೆ ಉದಾಹರಣೆ. ಕೆ.ಸಿ.ಶಿವಾರೆಡ್ಡಿಯವರ 'ಕನ್ನಡದ ಹಾಡು, ಪಾಡು' ಕೃತಿಯೂ ರೂಪಕಗಳ ಹಿಂದಿನ ಗ್ರಹಿಕೆಯನ್ನು ಅಧ್ಯಯನ ನಡೆಸುತ್ತದೆ.